ಶ್ರೀ ಕೊಣಂದೂರು ಲಿಂಗಪ್ಪ.—ಸ್ವಾಮಿ, ಇಪ್ಪತ್ತು ನಾವು ನಮ್ಮ ನಾಡಿನ ಹಿರಿಯ ಸಾಹಿತಿಗಳ ಸ್ಮರಣೆಯನ್ನು ನಾವು ಮಾಡಿಕೊಳ್ಳಹೇಕಾಗಿದೆ. ಕನ್ನಡಕ್ಕೆ ಸೇವೆ ಸಲ್ಲಿಸಿ ಕೀರ್ತಿಯನ್ನು ತಂದುಕೊಟ್ಟ ಸಾಹಿತಿಗಳು ಮಹಾನುಭಾವರು ನಮ್ಮ ರಾಜ್ಯದಲ್ಲಿದ್ದಾರೆ. ಹಿಂದೆ ನಮ್ಮ ರಾಜ್ಯದಲ್ಲಿ ಪಂಪ, ರನ್ನ ಕುಮಾರವ್ಯಾಸ ಮುಂತಾದ ಮಹಾ ಕವಿಗಳು ಏನಿದ್ದರು ಅವರ ಸಮಕಾಲೀನ ಸಾಹಿತಿಗಳ ಸಾಧನ ಕ್ಷೇತ್ರ ಗಳಾದ ಸ್ಥಳವಸತಿಗಳ ಬಗ್ಗೆ ನಾವು ವಿಷೇಷವಾದ ಆಸ್ಥೆಯನ್ನು ವಹಿಸಿ ಅವರಿಗೆ ಗೌರವವನ್ನು ಸಲ್ಲಿಸ ಬೇಕಾದ ಅವಶ್ಯಕತೆ ಇದೆ. ಆದ್ದರಿಂದ ನಮ್ಮ ಜೀವಂತ ಸಮಕಾಲೀನ ಸಾಹಿತಿಗಳ ಸಾಧನಾ ಕ್ಷೇತ್ರಗಳಾದ ವಸತಿಗಳು ಎಲ್ಲೆಲ್ಲಿ ಇವೆಯೋ ಅವುಗಳ ರಕ್ಷಣೆಯನ್ನು ಸರ್ಕಾರದವರು ವಹಿಸಿಕೊಂಡು ಅವುಗಳನ್ನು ವಿಶೇಷ ಸ್ಥಳವನ್ನಾಗಿ ಇಡಬೇಕು. ಅವುಗಳು ಕನ್ನಡ ಶ್ರೀಮಂತಿಕೆಯ ಪ್ರತಿನಿಧಿಗಳಾಗಿವೆ. ಈಗ ಶ್ರೀ ಶಿವರಾಮ ಕಾರಂತರು, ಕುವೆಂಪು, ಡಿ.ವಿ.ಜಿ ಯವರು, ದ.ರಾ. ಬೇಂದ್ರೆಯವರು, ಶ್ರೀರಂಗ ಅವರು ಮುಂತಾದ ಕವಿಗಳು ಇದ್ದಾರೆ. ಈ ಮಹಾ ಕವಿಗಳ ಸಾಧನಾ ಕ್ಷೇತ್ರಗಳು ಬೇರೆ ಬೇರೆ ಆಗಿವೆ. ಅವರು ತಮ್ಮ ವಾಸದ ಮನೆಗಳನ್ನು ಪರಭಾರೆ ಮಾಡುವುದಾದರೆ ಅದಕ್ಕೆ ಅವಕಾಶ ಕೊಡದೆ ರಾಜ್ಯ ಸರ್ಕಾರದವರೇ ಅವುಗಳನ್ನು ತಮ್ಮದು ಮಾಡಿಕೊಳ್ಳುವುದರ ಮೂಲಕ ಅವುಗಳನ್ನು ನಮ್ಮ ರಾಜ್ಯದಲ್ಲಿ ವಿಶೇಷವಾದ ಐತಿಹಾಸಿಕ ಸ್ಥಳವನ್ನಾಗಿ ಇಡಬೇಕು. ಆ ಕವಿಗಳಿಗೆ ನೆರವನ್ನು ಕೊಡಬೇಕು ಎಂದು ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಿದ್ದೇನೆ. ಇದು ಅತ್ಯಂತ ಅವಶ್ಯಕವಾದದ್ದು ಆದ್ದರಿಂದ ಈಗ ಚಲಿಸುವ ಜ್ಞಾನಕೋಶದಂತೆ ಇರುವ ಶ್ರೀಮಾನ್ ಕಾರಂತರು ಏನು ತಮ್ಮ ಮನೆಯನ್ನು ಬಿಟ್ಟುಕೊಡುವವರಿದ್ದಾರೋ ಆ ಪುತ್ತೂರಿನ ಮನೆಯನ್ನು ಸರ್ಕಾರದವರೇ ಶ್ರೀಮಂತರ ಪ್ರತೀಕವಾಗಿ ತೆಗೆದುಕೊಂಡು, ಆ ಮನೆಯನ್ನು ಐತಿಹಾಸಿಕ ಕ್ಷೇತ್ರವನ್ನಾಗಿ ಮಾಡಬೇಕು. ಅದೇ ರೀತಿ ಕನ್ನಡ ಕವಿಗಳೆಲ್ಲಾ ವಾಸಿಸುತ್ತಿರುವ ಸ್ಥಳಗಳನ್ನೆಲ್ಲಾ ಸಂರಕ್ಷಿಸಬೇಕೆಂದು ಕೇಳಿಕೊಳ್ಳುತ್ತೇನೆ. ಕಷ್ಟದಲ್ಲಿರುವ ಸಾಹಿತಿ ಗಳಿಗೆ ಮತ್ತು ಕವಿಗಳಿಗೆ ನೆರವು ನೀಡುವುದರ ಮೂಲಕ ನಮ್ಮ ಗೌರವವನ್ನು ನಾವೇ ಹೆಚ್ಚಿಸಿಕೊಳ್ಳ ಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

12-30 P. M.

ಶ್ರೀ ಡಿ. ದೇವರಾಜ ಅರಸ್.—ಮಾನ್ಯ ಸದಸ್ಯರು ಜನರಲ್ ಆಗಿ ಹೇಳಿದ್ದಾರೆ. ಆದ್ದರಿಂದ ಅದರ ಬಗ್ಗೆ ಈಗ ಏನನ್ನೂ ಹೇಳುವುದಕ್ಕೆ ಬರುವುದಿಲ್ಲ. ಅದನ್ನು ಯೋಚನೆ ಮಾಡೋಣ.

ಶ್ರೀ ಕೆ. ಎಂ. ನಾಗಣ್ಣ : ಫಿಲಂ ಕಾರ್ಪೊರೇಷನ್‌ಗೆ ಸಂಬಂಧಪಟ್ಟ ಒಂದು ಮುಖ್ಯವಾದ ಪ್ರಶ್ನೆ ಯನ್ನು ಕಳಿಸಿದ್ದೆ. ಅದಕ್ಕೆ ಜಾಗ್ರತೆ ಉತ್ತರ ದೊರಕಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾ ರದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ ; ೫ ದಿವಸಗಳ ಹಿಂದೆ ರೂಲ್ ೩೧೨ ರ ಪ್ರಕಾರ ಒಂದು ನೋಟೀಸ್ ಕಳಿಸಿದ್ದೆ. ಬೆಂಗಳೂರಿನ ಖಾಸಗೀ ಸಾಲೆಗಳ ಅವ್ಯವಹಾರದ ಬಗ್ಗೆ ಅಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರನ್ನು ಯಾವ ರೀತಿ ಶೋಷಣೆ ಮಾಡುತ್ತಿದ್ದಾರೆಂಬ ಬಗ್ಗೆ ಚರ್ಚೆ ಮಾಡಲು ಕಳಿಸಿದ್ದೆ. ಇನ್ನು ಎರಡು ದಿವಸ ಮಾತ್ರ ಈ ಸಭೆ ಸೇರುವುದರಿಂದ, ಅದರ ಬಗ್ಗೆ ಚರ್ಚೆ ಮಾಡಲು ಅವಕಾಶ ಕೊಟ್ಟರೆ ಬಹಳ ಅನುಕೂಲವಾಗುತ್ತದೆ. ಖಾಸಗಿ ವಿದ್ಯಾಭ್ಯಾಸ ಕ್ಷೇತ್ರ ಇಂದು ವ್ಯಾಪಾರ ಕ್ಷೇತ್ರವಾಗಿದೆ. ಉಪಾಧ್ಯಾಯರುಗಳು ಶೋಷಣೆ ಒಳಗಾಗಿದ್ದಾರೆ ಆದ್ದರಿಂದ ಈ ವಿಷಯದ ಬಗ್ಗೆ ಚರ್ಚೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕು.

Release of Famine Relief Funds in Hassan and other areas.

ಶ್ರೀ ಕೆ.ಎಜ್.ಹನುಮೇಗೌಡ(ಹಾಸನ)ಹಾಸನಜಿಲ್ಲೆಗೆ ಕ್ಷಾಮ ಪರಿಹಾರ ಕಾಮಗಾರಿಗಳಿಗಾಗಿ ೪೦ ಲಕ್ಷ ರೂಪಾಯಿಗಳು ಮಂಜೂರಾಗಿತ್ತು. ಆದರೆ ಆ ಹಣದಲ್ಲಿ ೯ ಲಕ್ಷ ರೂಪಾಯಿಗಳನ್ನು ವಾಪಸ್ ತೆಗೆದು ಕೊಂಡಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಕಾಗದ ಬರೆದಿದ್ದಕ್ಕೆ ೫೦ ಲಕ್ಷ ರೂಪಾಯಿಗಳನ್ನು ಮತ್ತೆ ಕೊಟ್ಟಿ ಕೆಲಸ ಮಂಜೂರು ಮಾಡುವುದಕ್ಕೆ ಹೇಳಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಆ ಹಣ ಇನ್ನೂ ಅಲ್ಲಿಗೆ ಬಂದಿಲ್ಲ. ಈ ಕಾರಣದಿಂದ ಸುಮಾರು ೨೫ ಲಕ್ಷ ರೂಪಾಯಿಗಳಷ್ಟು ಬಿಲ್ ಪೇಮೆಂಟ್ ಆಗದೆ ಪೆಂಡಿಂಗ್ ಇದೆ. ಒಂದು ಕಡೆ ಜನರಿಗೆ ಕೆಲಸ ಇಲ್ಲದಿದ್ದರೆ ಮತ್ತೊಂದು ಕಡೆ ಮಾಡಿದ ಕೆಲಸಕ್ಕೆ ಹಣ ಕೊಟ್ಟಿಲ್ಲ. ಆದಕಾರಣ ಹಾಸನ ಜಿಲ್ಲೆಯ ಸಂಬಂಧ ಪಟ್ಟ ಅಧಿಕಾರಿಗಳಿಗೆ ನಿರ್ದೇಶನ ಕೊಟ್ಟು ಪೆಂಡಿಂಗ್ ಇರುವ ಬಿಲ್‌ಗಳನ್ನು ಪೇಮೆಂಟ್ ಮಾಡುವಂತೆ ತಿಳಿಸಬೇಕು ಮತ್ತು ಅರ್ಧವಾಗಿರುವ ಕೆಲಸಗಳನ್ನು ತಕ್ಷಣ ಮುಗಿಸುವುದಕ್ಕೆ ಆದೇಶ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿ ಕೊಳ್ಳುತ್ತೇನೆ.

ಶ್ರೀ ಎಚ್.ಡಿ. ಕೃಷ್ಣಪ್ಪ :—ಹಳೆಯ ಮೈಸೂರಿನ ಕೆಲವು ಭಾಗಗಳಲ್ಲಿ ಪ್ರಾರಂಭ ಮಾಡಿದ ಕೆಲಸಗಳ ಅರ್ಧಕ್ಕೆ ನಿಂತಿವೆ. ಮತ್ತು ಸರ್ಕಾರದವರು ಕೊಟ್ಟ ಹಣವನ್ನು ಸರಿಯಾಗಿ ಖರ್ಚು ಮಾಡಿಲ್ಲ. ನೀರಾವರಿ ಕಟ್ಟೆಗಳನ್ನು ಅರ್ಧಕ್ಕೆ ಕಟ್ಟಿ ನಿಲ್ಲಿಸಿಬಿಟ್ಟರೆ, ಮಳೆ ಬಂದಾಗ ಕೊಚ್ಚಿಕೊಂಡು ಹೋಗುತ್ತದೆ. ಆದ್ದರಿಂದ ಅರ್ಧವಾಗಿರುವ ಕೆಲಸಗಳನ್ನು ಮುಗಿಸುವುದಕ್ಕೆ ಆದೇಶ ಕೊಡಬೇಕು ಮತ್ತು ಆ ಬಗ್ಗೆ ರಿಪೋರ್ಟ್ ತರಿಸಿಕೊಂಡು ಸಾಕಷ್ಟು ಹಣವನ್ನು ಸಹ ಒದಗಿಸಬೇಕೆಂದು ಆಗ್ರಹಪೂರ್ವಕವಾಗಿ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ : ಈಗ ಸರ್ಕಾರಧವರು ಆಯಾ ಜಿಲ್ಲೆಗಳಿಗೆ ಓಳನೇ ಫ್ಯಾಮಿನ್ ರಿಲೀಫ್ ಬಗ್ಗೆ ಹಣವನ್ನು ಒದಗಿಸಿದ್ದಾರೆ. ಈ ಹಣವನ್ನು ಏನು ಒದಗಿಸಲಾಗಿದೆ. ಆದರ ಎಷ್ಟರಷ್ಟು ಹಣವನ್ನು ಬೇಕಾದರೆ ಖರ್ಚು ಮಾಡಬಹುದೆಂದು ಆಯಾ ಜಿಲ್ಲಾಧಿಕಾರಿಗಳಿಗೆ ಸರ್ಕಾರದವರು ಕ್ಯಾಬಿನ್ಟ್ ನಲ್ಲಿ ತೀರ್ಮಾನ ತೆಗೆದುಕೊಂಡ ಪ್ರಕಾರ ತಿಳಿಸಿದ್ದಾರೆ. ಆ ರೀತಿ ತಿಳಿಸಿದ್ದರೂ ಸಹ ವಿಭಾಗಾಧಿಕಾರಿಗಳಂ ಆ ರೀತಿ ಖರ್ಚು ಮಾಡಬಾರದೆಂದು ಹೇಳಿ ಕೊಟ್ಟ ಹಣವನ್ನು ವಾಪಸ್ ಪಡೆಯುತ್ತಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ : ಆ ರೀತಿ ಏನೂ ಇಲ್ಲ.

ಶ್ರೀ ಕೋಣಂದೂರು ಲಿಂಗಪ್ಪ : ಕ್ಯಾಬಿನೆಟ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದು ಸರಿಯಲ್ಲ ಎಂದು ಹೇಳುವಂತಹ ಸೂಪರ್ ಕ್ಯಾಬಿನೆಟ್ ಏನಾದರು ಇದೆಯೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚುಮಾಸ್ತಿಗೌಡ : ಜಿಲ್ಲಾವಾರು ಇಷ್ಟಿಷ್ಟು ಹಣ ಎಂದು ಮೊದಲು ಏನು ತೀರ್ಮಾನ ಮಾಡಿ ಮಂಜೂರು ಮಾಡಲಾಗುತ್ತೋ, ಆದರ ಎರಡರಷ್ಟು ಹಣ ಖರ್ಚು ಮಾಡಿ ಕೆಲಸಗಳನ್ನು ತೆಗೆದುಕೊಳ್ಳಬಹುದು ಎಂದು ಹೇಳಿದರು ನಿಜ. ಆದರೆ ರಾಜ್ಯದ ಉತ್ತರ ಭಾಗಗಳಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದ್ದರಿಂದ, ಇತರೇ ಜಿಲ್ಲೆಗಳಲ್ಲಿ ಕೆಲಸ ನಿಲ್ಲಸಬೇಕೆಂದು ಹೇಳಿದ್ದರಿಂದ ಅರ್ಧ ಕೆಲಸಗಳಾಗಿರುವುದೂ ನಿಜ. ಅರ್ಧ ಕೆಲಸದಾಗಿರುವ ಕಡೆ ಅದನ್ನು ಮುಗಿಸಲು ಈಗ ಹೇಳಿದ್ದೇವೆ. ಮತ್ತು ಅದಕ್ಕೆ ಬೇಕಾಗುವ ಹಣವನ್ನು ಕೊಡುತ್ತೇವೆ. ಆದರೆ ಕೆಲವು ತಾಲ್ಲೂಕುಗಳಲ್ಲಿ ರಸ್ತೆ ಕೆಲಸಗಳಿಗೆ ಬದಲು ದೊಡ್ಡ ದೊಡ್ಡ ಸೇತುವೆ ಕೆಲಸಗಳನ್ನು ಕೈಕೊಂಡು ಅರ್ಧಕ್ಕೆ ನಿಲ್ಲಿಸಿಬಿಟ್ಟಿದ್ದಾರೆ. ಇಂತಹ ಸಂದರ್ಭಗಳಲ್ಲಿ ಮಾತ್ರ ಪ್ರತಿಯೊಂದು ಕೇಸ್‌ಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಎರಡರಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಮಾತ್ರ ಜಿಲ್ಲಾಧಿಕಾರಿಯವರಿಗೆ ತಿಳಿಸಿದ್ದೇವೆ.

ಶ್ರೀ ಟಿ. ಎಂ. ಮಂಜುನಾಥ . ರೂಲ್ ೫೯ರ ಪ್ರಕಾರ ಆಹಾರ ಸರಬರಾಜಿನ ವಿಷಯದಲ್ಲಿ ಚರ್ಚೆ ಮಾಡಲು ಒಂದು ನೋಟೀಸನ್ನು ಕಳಿಸಿದ್ದೆ. ಆದರ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿ ಕೊಡಬೇಕು. ಮತ್ತು ಇಂದು ನಾನು, ಶ್ರೀ ಬಸವಯ್ಯ ಮತ್ತು ಶ್ರೀ ಕೋಣಂದೂರು ಲಿಂಗಪ್ಪನವರು ಸೇರಿ ಒಂದು ಕಾಲ್ ಅಟೆನ್‌ಷನ್ ನೋಟಿಸನ್ನು ಖಾಸಗೀ ಶಾಲೆಗಳ ಉಪಾಧ್ಯಾಯರ ಬಗ್ಗೆ ಕಳಿಸಿದ್ದೇವೆ.

ಅಧ್ಯಕ್ಷರು. ನೋಡಿಸುತ್ತೇನೆ.

SUPPLEMENTARY AND ADDITIONAL DEMMANDS FOR GRANTS FOR 1972-73 (Ist Instalment)GENERAL DISCUSSION DEBATE CONTD

ಶ್ರೀ ಕೋಣಂದೂರು ಲಿಂಗಪ್ಪ: (ತೀರ್ಥಹಳ್ಳಿ) ಸನ್ಮಾನ್ಯ ಅಧ್ಯಕ್ಷಿಣಯವರೇ, ಮಾನ್ಯ ಅರ್ಥಸಚಿವರು ಏನು ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ನ್ನು ಸಭೆಯ ಮುಂದೆ ಇಟ್ಟು ಪುನಃ ಕೈಗಡ ಕೇಳಿದ್ದಾರೆ ಅದರ ಬಗೆ ಕೆಲವು ಮಾತುಂಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ನಿನ್ನೆ ದಿವಸ ಮಾತನಾಡಿವ ವಿರೋಧಪಕ್ಷದ ನಾಯಕರು ಮತ್ತು ನಮ್ಮ ಪಕ್ಷದ ನಾಯಕರು ಮಂಗಳೂರು ರಾಸಾಯನಿಕ ಗೊಬ್ಬರದ ಕಾರ್ಖಾನೆಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರ ಬಗ್ಗೆ ನಾನು ಹೆಚ್ಚು ಹೆಳುವುದಕ್ಕೆ ಹೋಗುವುದಿಲ್ಲ. ಆದರೂ ಆದೇ ವಿಷಯದಲ್ಲಿ ಒಂದು ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ನಮ್ಮ ರಾಜ್ಯದಲ್ಲಿ ಸಧ್ಯದಲ್ಲಿ ವಿಜಯನಗರದಲ್ಲಿ ಉಕ್ಕಿನ ಕಾರ್ಖಾನೆ ಪ್ರಾರಂಭವಾಗುವುದಿದೆ. ಈ ಕಾರ್ಖಾನೆಯಲ್ಲಿ ಮತ್ತು ಇತರೇ ಕಾರ್ಖಾನೆಗಳಲ್ಲಿ ನಮ್ಮ ಜನರಿಗೆ ಉದ್ಯೋಗಗಳನ್ನು ಒದಗಿಸಿಕೊಡುವ ನೀತಿಯನ್ನು ಬಹಳ ಮುಖ್ಯವಾಗಿ ಅನುಸರಿಸಬೇಕಾಗಿದೆ. ಈ ವಿಷಯದಲ್ಲಿ ವಿಶಾಲ ಮನೋ ಭಾವನೆಯನ್ನು ಹೊಂದುವುದರ ಮೂಲಕ ನಮ್ಮ ಕಾಲಿನ ಮೇಲೆ ನಾವೇ ಕಲ್ಲು ಹಾಕಿಕೊಳ್ಳುವುದು ಬೇಡ. ನಮ್ಮ ಮನೆಗೆ ನಾವೇ ಬೆಂಕಿ ಹಚ್ಚಿಕೊಂಡು ಊರಿಗೆ ಬೆಳಕು ಮಾಡುವುದು ಬೇಡ. ಮತ್ತು